ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ಪ್ರತಿವರ್ಷ ಬರುವ ಸಿಆರ್‌ಎಫ್ ಹಣದ ಮೊತ್ತ

154 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಪ್ರತಿ ವರ್ಷ ಬರಬೇಕಾದ ಸಿ.ಆರ್.ಎಫ್. ಹಣವೆಷ್ಟು?

ಆ) ಇದು ಪ್ರತಿ ವರ್ಷ ನಮ್ಮ ರಾಜ್ಯಕ್ಕೆ ಬರುತ್ತಿದೆಯೇ? ಹಾಗೂ ಇನ್ನೂ ಎಷ್ಟು ಹಣ ಬರಬೇಕಾಗಿದೆ.

ಇ) ಮೂಡಿಗೆರೆ ತಾಲ್ಲೂಕಿನಲ್ಲಿ ಸಿ.ಆರ್.ಎಫ್. ಹಣದಲ್ಲಿ ಎಷ್ಟು ರಸ್ತೆ ಕಾಮಗಾರಿಗಳನ್ನು ಪ್ರಾರಂಭಿಸಲು ಶಿಫಾರಸ್ಸು ಮಾಡಲಾಗಿದೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಸಿ.ಆರ್.ಎಫ್. ಅನುದಾನದ ಬಗ್ಗೆ ಸಂಸತ್ತಿನಲ್ಲಿ ಮೇ 1988ರಲ್ಲಿ ಅಂಗೀಕರಿಸಿದ ಹೊಸ ನಿರ್ಣಯದ ಪ್ರಕಾರ ಪ್ರತಿ ವರ್ಷ ರಾಜ್ಯಕ್ಕೆ 15.57 ಕೋಟಿ ರೂ.ಗಳು ಬರಬೇಕಾಗಿದೆ.

ಆ) ಇಲ್ಲ, ಕೇಂದ್ರ ಆರ್ಥಿಕ ಸಚಿವಾಲಯವು ಸಂಸತ್ತಿನಲ್ಲಿ ಅಂಗೀಕರಿಸಿದ ಹೊಸ ನಿರ್ಣಯದ ಪ್ರಕಾರ ಅನುದಾನವನ್ನು ಇದುವರೆವಿಗೂ ರಾಜ್ಯಕ್ಕೆ ಬಿಡುಗಡೆ ಮಾಡಿರುವುದಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಬರಬೇಕಾದ ಹಣ 62.28 ಕೋಟಿ ರೂ.ಗಳು.

ಇ) ಮೂಡಿಗೆರೆ ತಾಲ್ಲೂಕಿನ ಮೂರು ರಸ್ತೆ ಕಾಮಗಾರಿಗಳನ್ನು ಶಿಫಾರಸ್ಸು ಮಾಡಲಾಗಿದೆ.

ಮೂಡಿಗೆರೆ ತಾಲ್ಲೂಕಿನ ಮಾಗುಂಡಿ-ಕಳ್ಳರಸ್ತೆ ಹಾಳಾಗಿರುವ ಕುರಿತು

111 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ಮಾಗುಂಡಿ ಕಳಸ ರಸ್ತೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮೇಲಿನ ರಸ್ತೆ ಅಭಿವೃದ್ಧಿಗೆ ಸರ್ಕಾರ ವಿಶೇಷ ಅನುದಾನ ಬಿಡುಗಡೆ ಮಾಡಿ ದುರಸ್ತಿ ಕೆಲಸಗಳನ್ನು ಮಾಡುವುದೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಪಡುಬಿದ್ರೆ-ಕೊಟ್ಟಿಗೆಹಾರದ ರಸ್ತೆಯ ಮಾಗುಂಡಿ-ಕಳಸ ಭಾಗದ ರಸ್ತೆಯು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರಸ್ತೆಯ ಭಾಗವನ್ನು ದುರಸ್ತಿ ಪಡಿಸಿ ಅಭಿವೃದ್ಧಿಪಡಿಸಲು ಗುತ್ತಿಗೆಯನ್ನು ಕರೆಯಲಾಗಿದ್ದು ಈ ಸಾಲಿನಲ್ಲಿಯೇ ಪೂರ್ಣಗೊಳಿಸಲಾಗುವುದು.

ಮೂಡಿಗೆರೆ ತಾಲ್ಲೂಕಿನಲ್ಲಿ ಒಟ್ಟು ಸಮಸ್ಯಾತ್ಮಕ ಗ್ರಾಮಗಳ ಸಂಖ್ಯೆ

112 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?